ಲೋಕೋಪಯೋಗಿ ರಸ್ತೆಗಳ ಹಾಳಾಗಿರುವ ಸರಪಳಿಗಳನ್ನು ಲಭ್ಯ ಅನುದಾನದಲ್ಲಿ ದುರಸ್ತಿಗೊಳಿಸಲಾಗುವುದು.

ಶಾಂತಿ ಸಾಗರದಲ್ಲಿ (ಸೂಳೆಕೆರೆ) ಅಭಿವೃದ್ಧಿ ಕಾರ್ಯ

5005 - ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಾಂತಿ ಸಾಗರದಲ್ಲಿ (ಸೂಳೆಕೆರೆ) 2000-2001ನೇ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ?*

ಆ) *ಹಾಗಿದ್ದಲ್ಲಿ ಆ ಕಾರ್ಯಕ್ರಮಗಳು ಯಾವುವು?*

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಷ್ಟ್ರೀಯ ಸಾಹಸ ಅಕಾಡೆಮಿ ಆಶ್ರಯದಲ್ಲಿ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳು

5006 - ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿರುವ ವಿವಿಧ ಕಾರ್ಯಕ್ರಮಗಳಾವುವು?*

ಆ) *1998-99 ಹಾಗೂ 1999-2000ನೇ ಸಾಲಿನಲ್ಲಿ ಈ ಸಂಸ್ಥೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ವಿವಿಧ ಜಿಲ್ಲೆಗಳಿಂದ ಭಾಗವಹಿಸಿದ ಯುವ ಜನರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)*

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ ವಿವಿಧ ಸಾಹಸ ಕಾರ್ಯಕ್ರಮಗಳಾದ ಭೂ ಸಾಹಸ, ಜಲ ಸಾಹಸ ಹಾಗೂ ವಾಯು ಸಾಹಸ ಕ್ರೀಡೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಭೂ ಸಾಹಸ ಕ್ರೀಡೆಗಳಲ್ಲಿ ವಾರಾಂತ್ಯ ಶಿಬಿರ ಹಾಗೂ ಹೊರಾಂಗಣ ಪ್ರಕೃತಿ ಅಧ್ಯಯನ ಶಿಕ್ಷಣ ಶಿಬಿರಗಳನ್ನು ಮಕ್ಕಳಿಗಾಗಿ ಹಾಗೂ ಯುವಕ/ಯುವತಿಯರಿಗೆ ಟ್ರೆಕ್ಕಿಂಗ್ ಮತ್ತು ಶಿಲಾರೋಹಣ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ. ಜಲ ಸಾಹಸ ಕ್ರೀಡೆಗಳಲ್ಲಿ ಯುವಕ/ಯುವತಿಯರಿಗೆ ಕಯಾಕಿಂಗ್, ಕೆನೋಯಿಂಗ್, ಬೋಟಿಂಗ್, ರಿವರ್ ರ್ಯಾಪ್ಟಿಂಗ್ ಹಾಗೂ ವಿಂಡ್